## ಶ್ರೀ ಸುತ್ತೂರು ಮಠ

### ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 245

**11 ಆಗಸ್ಟ್ 2022 * ಗುರುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಗಾಯನ



ವಿದುಷಿ ಶ್ರುತಿ ಎಸ್. ಭಟ್



ವಿದುಷಿ ಪೃಥ್ವೀ ಭಾಸ್ಕರ

ವಯೊಲಿನ್



ವಿದ್ವಾನ್ ಕೆ.ವಿ. ರವಿಶಂಕರ ಶರ್ಮ

ಮೃದಂಗ



ವಿದ್ವಾನ್ ಎಸ್. ಮಂಜುನಾಥ್

ಘಟಂ

ಸರ್ವರಿಗೂ ಹಾರ್ದಿಕ ಸುಸ್ವಾಗತ

**ವಿದುಷಿ ಶ್ರುತಿ ಎಸ್. ಭಟ್**ರವರು ಕರ್ನಾಟಕ ಸಂಗೀತದ ಉದಯೋನ್ಮುಖ ಕಲಾವಿದರಲ್ಲೊಬ್ಬರು. ಖ್ಯಾತ ವಿದ್ವಾಂಸರಾದ ಸಂಗೀತ ಕಲಾ ಆಚಾರ್ಯ ಚೆಂಗಲ್‌ಪೇಟ್ ಶ್ರೀ ರಂಗನಾಥನ್, ಕಲೈಮಾಮಣಿ ಶ್ರೀಮುಷ್ಣಂ ವಿ. ರಾಜಾರಾವ್ ಮತ್ತು ಶ್ರೀಮತಿ ಪದ್ಮಾ ಶಾಂಡಿಲ್ಯನ್‌ರವರುಗಳ ಬಳಿ ಶಿಷ್ಯವೃತ್ತಿ ಮಾಡಿ ಸಂಗೀತದ ಸೂಕ್ಷ್ಮತೆಗಳನ್ನು ಕರಗತ ಮಾಡಿಕೊಂಡಿರುವರು. ಮದ್ರಾಸ್ ವಿಶ್ವವಿದ್ಯಾನಿಲಯದ ಎಂ. ಮ್ಯೂಸಿಕ್ ಪದವೀಧರರು. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿಯಿಂದ ಕರ್ನಾಟಕ ಸಂಗೀತದಲ್ಲಿ ಉನ್ನತ ಶಿಕ್ಷಣ ಪಡೆದು, ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಚೆನ್ನೈ ಆಕಾಶವಾಣಿಯ "ಬಿ" ಗ್ರೇಡ್ ಕಲಾವಿದರು. ಭಾರತ್ ಕಲಾಚಾರ್‌ನ ಯುವ ಕಲಾ ಭಾರತಿ ಪ್ರಶಸ್ತಿ, ಚೆನ್ನೈನ ಶ್ರೀಕೃಷ್ಣ ಗಾನಸಭಾ, ಮೈಸೂರಿನ ಭ್ರಮರ ಟ್ರಸ್ಟಿನ ಭಾರತರತ್ನ ಶ್ರೀಮತಿ ಎಂ.ಎಸ್. ಸುಬ್ಬಲಕ್ಷ್ಮಿ ರಾಷ್ಟ್ರೀಯ ಪ್ರಶಸ್ತಿ, ಉತ್ತಮ ಕಲಾಪ್ರದರ್ಶನಕ್ಕಾಗಿ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಪ್ರಶಸ್ತಿ ಮತ್ತು ಟ್ರಿನಿಟಿ ಆರ್ಟ್ಸ್ ಫೆಸ್ಟಿವಲ್ ಆಫ್ ಇಂಡಿಯಾದ ‘ಇಸೈ ಚೆಮ್ಮಾಳ್’ ಮುಂತಾದ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮುಂಬಯಿ, ಸಿಂಗಪೂರ್ ಮೊದಲಾದ ಕಡೆ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಕಚೇರಿ ನೀಡಿ ರಸಿಕರ ಮತ್ತು ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ದಾಸರ ಕೃತಿಗಳು, ಸಂಗೀತ ತ್ರಿಮೂರ್ತಿಗಳ ಕಾಲಾನಂತರದ ಸಂಗೀತ, ತ್ಯಾಗರಾಜರ ಕೃತಿಗಳು, ಜನಪ್ರಿಯ ತಮಿಳು ರಚನೆಗಳು ಮುಂತಾದ ವಿಷಯಾಧಾರಿತ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

**ವಿದುಷಿ ಪೃಥ್ವೀ ಭಾಸ್ಕರ್‌ರವರು** ಯುವ ಗಾಯಕರು ಮತ್ತು ಪ್ರತಿಭಾನ್ವಿತ ವಯೊಲಿನ್ ವಾದಕರು. ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ನಾಲ್ಕನೇ ವಯಸ್ಸಿನಲ್ಲಿಯೇ ತಾತ ಶ್ರೀ ಎಚ್.ಕೆ. ನರಸಿಂಹಮೂರ್ತಿ ಹಾಗೂ ಅಜ್ಜಿ ಶ್ರೀಮತಿ

ಎಚ್.ಎನ್. ರಾಜಲಕ್ಷ್ಮಿಯವರ ಬಳಿ ವಯೊಲಿನ್ ವಾದನವನ್ನು ಕಲಿಯತೊಡಗಿದರು. ಈಗ ಶ್ರೀ ಪ್ರಭುರಾವ್‌ರವರ ಹತ್ತಿರ ಹಿಂದೂಸ್ಥಾನಿ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಕರ್ನಾಟಕ ಸರ್ಕಾರದ ನೆಹರೂ ಬಾಲಭವನದ 'ಕಲಾಶ್ರೀ' ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಮತ್ತು ವಯೊಲಿನ್ ವಾದನ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿ ಪಡೆದಿದ್ದಾರೆ.

**ವಿದ್ವಾನ್ ಕೆ.ವಿ. ರವಿಶಂಕರ ಶರ್ಮರವರು** ವಿದ್ವಾಂಸರುಗಳಾದ ಶ್ರೀ ಟಿ.ಎನ್. ಶಶಿಕುಮಾರ್, ಕರ್ನಾಟಕ ಕಲಾಶ್ರೀ ಎಂ. ವಾಸುದೇವರಾವ್, ಆನೂರು ಅನಂತಕೃಷ್ಣ ಶರ್ಮ ಮತ್ತು ಶ್ರೀ ಗುರುವಾಯೂರು ದೊರೈರವರುಗಳ ಬಳಿ ವಿದ್ಯಾರ್ಜನೆ ಮಾಡಿರುವವರು. ಬೆಂಗಳೂರು ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಬೆಂಗಳೂರಿನ ಗಾಯನ ಸಮಾಜವು 1990ರಷ್ಟು ಹಿಂದೆಯೇ ಇವರಿಗೆ "ಅತ್ಯುತ್ತಮ ಮೃದಂಗ ವಾದಕ", "ಅತ್ಯುತ್ತಮ ಪಕ್ಕವಾದ್ಯಕಾರ" ಪ್ರಶಸ್ತಿಗಳನ್ನು ನೀಡಿದೆ. ಅವರು ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿಕೊಂಡು 'ಶ್ರುತಿಸಿಂಧೂರ'ವೆಂಬ ಲಯವಾದ್ಯ ತಂಡವನ್ನು ಕಟ್ಟಿದ್ದಾರೆ.

**ವಿದ್ವಾನ್ ಎಸ್. ಮಂಜುನಾಥ್‌ರವರು** ವಿದ್ವಾನ್ ಟಿ.ವಿ. ಭದ್ರಾಚಾರ್ ಮತ್ತು ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಕಳೆದ ಎರಡು ದಶಕಗಳಿಂದ ಘಟಂ ಮತ್ತು ಮೃದಂಗ ವಾದನವನ್ನು ಕಲಿತಿದ್ದಾರೆ. ಹಲವಾರು ಸಿ.ಡಿ.ಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಜೆಎಸ್‌ಎಸ್ ಸಂಸ್ಥೆಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 246

**10 ಸೆಪ್ಟೆಂಬರ್ 2022**



## ಜಲತರಂಗ

**ವಿದುಷಿ ಶಶಿಕಲಾ ದಾನಿ**

## ತಬಲ

**ಪಂ. ರಮೇಶ್ ಧನ್ನೂರ್**



---

**ಫೋನ್: 0821–2548221, 2548223 * ಇಮೇಲ್: sutturmath@jssonline.org**